CC-O. In Public Domain. Digitized by eGangotri

ಆರ್ಷ ವಿದ್ಯಾ

ಋಷಿಗಳ ದೃಷ್ಟಿ

ಮೂಲ ಇಂಗ್ಲಿಷ: ಸ್ವಾಮಿ ದಯಾನಂದ ಸರಸ್ವತಿ

Sri Vidyabharathi Book Centre, Sringeri

ಕನ್ನಡಕ್ಕೆ ಅನುವಾದ: ಶಿವರಾಗ ಗ. ಮೋಘಾಶಿ, ಹುಬ್ಬಳ್ಳಿ

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಆರ್ಷ ವಿದ್ಯಾ

ಋಷಿಗಳ ದೃಷ್ಟಿ

ಮೂಲ ಇಂಗ್ಲೀಷ : ಸ್ವಾಮಿ ದಯಾನಂದ ಸರಸ್ವತಿ
ಕನ್ನಡ ಅನುವಾದಕರು : ಶಿವರಾವ ಗ. ಮೊಖಾಸಿ

ಆರ್ಷ ವಿದ್ಯಾ

ಋಷಿ ಎಂದರೆ ತಿಳಿದವನು - ಈ ಶಬ್ದವು 'ಋ' ಎಂಬ ಸಂಸ್ಕೃತ ಧಾತುವಿನಿಂದ ಹುಟ್ಟಿರುತ್ತದೆ. ಈ ಧಾತುವಿನ ಅರ್ಥವು ಜ್ಞಾನ-ಅರಿವು. ಋಷಿಗಳ ಜ್ಞಾನ (ವಿದ್ಯೆಯು) 'ಆರ್ಷವಿದ್ಯೆ'ಯೆಂದು ಕರೆಯಲ್ಪಡುತ್ತದೆ.

ಜ್ಞಾನ ಪ್ರವಾಹ

ಮುನಿಗಳು ಮುನಿಗಳನ್ನು ಹುಟ್ಟಿಸಲಾರರು. ಯಾಕೆಂದರೆ ಅವರು ಮುನಿಗಳೇ. ಮುನಿಯು ತನ್ನಷ್ಟೇ

Sri Vidyabharathi Book Centre, Sringeri

CC-0. In Public Domain. Digitized by eGangotri
ಸಮರ್ಥನಾದ ಇನ್ನೊಬ್ಬ ಮಹಾಪುರುಷ ಬರಬಹುದು.
ಅವನು ಮಾಡಿದ್ದೇ ಆದರೆ ಅಲ್ಲಿ ಅರುಹಿಸುವ ಸಾಧ್ಯತೆ
ಇರುತ್ತದೆ. ಆದ್ದರಿಂದ ಅಲ್ಲಿ ಅದರ ಬಗ್ಗೆ ಯಾವ
ರಹಸ್ಯವೂ ಇರುವದಿಲ್ಲ. ಆಗ ಅಲ್ಲಿ ಶಿಕ್ಷಕನು
ಇರುತ್ತಾನೆ. ಮುನಿಗಳಿಗೆ ಪರಂಪರೆಯು ಇರುವುದಿಲ್ಲ.
ಯಾವಾಗ ಶಿಕ್ಷಣದ ಪ್ರಸಂಗ ಬರುವದೋ ಆವಾಗ್ಗೆ
ಅಲ್ಲಿ ಅರುಹಿಕೆಯು ಇರುತ್ತದೆ. ಆಮೇಲೆ ಅಲ್ಲಿ
ಉಪದೇಶ ಪರಂಪರೆ ಇರಬಹುದು-ಶಿಕ್ಷಕ, ಶಿಷ್ಯ ಮತ್ತು
ಅವನ ಅಥವಾ ಅವಳ ಶಿಷ್ಯ; ಗುರು-ಶಿಷ್ಯ- ಪ್ರಶಷ್ಯ
ಪರಂಪರೆ. ಈ ಪ್ರಕಾರ ಪ್ರವಾಹವು ಸಾಧ್ಯವಿರುತ್ತದೆ.
ಜ್ಞಾನವು ಯಾವಾಗಲೂ ಹೃದಯ ಮತ್ತು ಮನಸ್ಸಿನ
ಕಡೆಗೆ ಹರಿಯುತ್ತದೆ.

ಜ್ಞಾನವು ಹಳೆಯದು ಅಥವಾ ಏನೋ
ಹೊಸದು ಎಂದು ಪರಿಗಣಿಸಲಾಗದು. ಅದು
ಅಪ್ರಚಲಿತವಾಗದೇ ಇರುವದರಿಂದ ಅದು ಹಳೆಯದು
ಅಲ್ಲ. ಯಾವ ಹೊಸದೂ ಅದಕ್ಕೆ ಕೂಡಿಸದಿರುವದರಿಂದ

CC-0. In Public Domain. Digitized by eGangotri

ಅದು ಹೊಸದು ಅಲ್ಲ. ಆದ್ದರಿಂದ ಗಂಗಾ ನದಿಯ ಪ್ರವಾಹದ ಹಾಗೆ, ಗುರುವಿನಿಂದ ಶಿಷ್ಯನಿಗೆ ಬರುವಂತೆ ಅದು ಪರಿಶುದ್ಧ. ಗಂಗಾ ನದಿಯು ಪುರಾತನದಿರುತ್ತದೆ. ಅದು ಭೂಮಿಯ ಮೇಲೆ ಎಂದು ಹರಿಯಲು ಪ್ರಾರಂಭಿಸಿತೆಂಬುದು ನಮಗೆ ಗೊತ್ತಿಲ್ಲ.

ಒಮ್ಮೆ ಸ್ವರ್ಗದಲ್ಲಿ ಹರಿದ ಆ ನದಿಯನ್ನು ಭಗೀರಥನು ತಪಸ್ಸು ಮಾಡಿ ಭೂಮಿಗೆ ತಂದನೆಂದು ಕಥೆಯು ನಮ್ಮಲ್ಲಿರುತ್ತದೆ. ಅದು ಪ್ರಾಚೀನ ನದಿ ಎಂಬುದರಲ್ಲಿ ಸಂಶಯವಿಲ್ಲ. ಆದರೆ ನೀನು ಆ ನದಿಯಲ್ಲಿ ಸ್ನಾನ ಮಾಡಿದಾಗ್ಗೆ ಆ ನೀರು ಸ್ವಚ್ಛವಿರುತ್ತದೆ ಮತ್ತು ನಿನ್ನನ್ನು ಪ್ರಸನ್ನನನ್ನಾಗಿ ಮಾಡಿಬಿಡುತ್ತದೆ. ಶ್ರದ್ಧೆಯೂ, ನಂಬಿಕೆಯೂ ಇದ್ದಂಥ ಜನರಿಗೆ ಆ ನದಿಯ ಸ್ನಾನವು ದೇಹಕ್ಕೆ ಹೊಸ ಚೈತನ್ಯವನ್ನು ತಂದು ಕೊಡುವದಲ್ಲದೇ ಅವರ ಮನಸ್ಸನ್ನು ಕೂಡ ಶುದ್ಧ ಮಾಡುತ್ತದೆ. ಹಳೆಯ ಪಾಪಗಳು ಕೂಡ ತೊಳೆದು ಹೋಗುತ್ತವೆ. ಅವರು ಗಂಗೆಯನ್ನು ನದಿಯು ಮಾತ್ರ

Sri Vidyabharathi Book Centre, Sringeri

CC-0. In Public Domain. Digitized by eGangotri

ಎಂಬ ದೃಷ್ಟಿಯನ್ನು ಇಟ್ಟುಕೊಂಡಿರುವದಿಲ್ಲ. ಬೇರೆ ದೃಷ್ಟಿಕೋನವೇ ಇರುತ್ತದೆ. ಯಾರ ಸ್ಪರ್ಶವು ಮನುಷ್ಯನನ್ನು ಪರಿಶುದ್ಧನನ್ನಾಗಿ ಮಾರ್ಪಡಿಸುತ್ತದೋ ಅಂತಹ ಜ್ಞಾನ ಪ್ರವಾಹವೇ ಅವಳಾಗಿರುತ್ತಾಳೆ.

ಜ್ಞಾನಕ್ಕಿಂತ ಹೆಚ್ಚು ಪವಿತ್ರವೂ, ಪರಿಶುದ್ಧವೂ ಇರುವಂತಹದು ಈ ಜಗತ್ತಿನಲ್ಲಿ ಬೇರೊಂದಿಲ್ಲ. ಆದ್ದರಿಂದ 'ಆರ್ಷ ವಿದ್ಯೆ' ಎಂಬ ಈ ಜ್ಞಾನವು ಗುರುವಿನಿಂದ ಶಿಷ್ಯನಿಗೆ ಮತ್ತು ಅವನ ಅಥವಾ ಶಿಷ್ಯನಿಗೆ, ನದಿಯು ಹರಿಯುವಂತೆ, ಕೆಳಗಿನವರೆಗೆ ಇಳಿಯುತ್ತದೆ. ಮತ್ತು ಜ್ಞಾನವು ಜ್ಞಾನವೇ ಇರುವದರಿಂದ ಅದು ಯಾವಾಗಲೂ ಆ ವಸ್ತುವಿಗೆ ಸತ್ಯವಾಗಿರುತ್ತದೆ. ಜ್ಞಾನವು ತಾನೇ ಆಗಿರುವದಿಂದ ಅದಕ್ಕೆ ಪ್ರತಿಕೂಲವಾದ ಮತ್ತೊಂದು ಜ್ಞಾನವಿರಲಾರದು. ಯಾವದೇ ಅನುಭವವುಳ್ಳ ಜ್ಞಾನವು ಅನುಭವ ವ್ಯವಹಾರಕ್ಕೆ ಮಾತ್ರ ಉಪಯುಕ್ತವಾಗಿರುವದರಿಂದ ಅದನ್ನು ಒಪ್ಪದಿರುವದಕ್ಕೆ ನಿಜವಾದ ಕಾರಣವಾಗಿರುತ್ತದೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಇದು ಹೂವು ಮತ್ತು ಗುಲಾಬಿಯು. ಇದು ಹೂವು ಮತ್ತು ಗುಲಾಬಿ ಎಂಬ ಜ್ಞಾನವು ನಿಮಗೆ ಇರುತ್ತದೆ. ಆದರೆ ಏನೂ ಗೊತ್ತಿರದಂತಹ ಬೇರೆ ಅಂಗಗಳು ಈ ಹೂವಿನಲ್ಲಿ ಇರುವವೆಂಬುದು ನಿಮಗೆ ಗೊತ್ತೇ ಇರುವದಿಲ್ಲ. ಆದ್ದರಿಂದ ನಿನ್ನಲ್ಲಿರುವ ಯಾವದೇ ವಸ್ತುವಿನ ಜ್ಞಾನವು ಅಪೂರ್ಣವು.

ಯಾವದೇ ಜ್ಞಾನದ ಕಟ್ಟುಪಾಡಿನಲ್ಲಿ ಕೊನೆ ಎಂಬ ಶಬ್ದಕ್ಕೆ ನಾವು ಬಂದು ಮುಟ್ಟಿಲ್ಲ. ಏನೂ ತಿಳಿಯದವನು, ಯಾವನು ಹೆಚ್ಚು ತಿಳಿದಿರುತ್ತಾನೋ ಅವನಿಂದ ತಿಳಿಯಲ್ಪಡುವನು ಎಂಬುದು ಈ ಅನುಭವವುಳ್ಳ ಜ್ಞಾನದಿಂದ ನಿಜವಾಗಿ ಗೊತ್ತಾಗುತ್ತದೆ. ಅತಿ ಹೆಚ್ಚು ತಿಳಿದುಕೊಂಡ ಮನುಷ್ಯನು ಅತಿ ಹೆಚ್ಚು ಅಜ್ಞಾನಿಯಾಗುತ್ತಾನೆ. ಯಾಕೆಂದರೆ ಅವನಿಗೆ ಗೊತ್ತಿಲ್ಲದಿರುವದೆಲ್ಲವನ್ನೂ ತಿಳಿದಿರುತ್ತಾನೆ. ಪೂರ್ಣ ಅಜ್ಞಾನ ಮನುಷ್ಯನಿಗೆ ಮಾತ್ರ-ತನಗೆ ಏನೂ ಗೊತ್ತಿಲ್ಲ ಎಂಬುದು ಅವನಿಗೆ ಗೊತ್ತಿರುವದಿಲ್ಲ. ಆದ್ದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri
ಅವನು ತಾನೇ ಜ್ಞಾನಿ ಮನುಷ್ಯನೆಂದು ತಿಳಿಯುತ್ತಾನೆ. ಯಾವದೇ ಅನುಭವವುಳ್ಳ ಜ್ಞಾನವು ಕೊನೆಯದಲ್ಲ ಮತ್ತು ಅದು ನಿರ್ಣಾಯಕವಲ್ಲ.

ಉದಾಹರಣಾರ್ಥವಾಗಿ ಅಡವಿಯ ಮಾಹಿತಿಯನ್ನೇ ತೆಗೆದುಕೊ. ಗಿಡಗಳು, ಪೊದೆಗಳು, ಮೂಲಿಕೆಗಳು ಮತ್ತು ಕಂಟಿಗಳು, ಬಳ್ಳಿ ಮತ್ತು ಲತೆಗಳು ಮತ್ತು ಬೇರೆ ಬೇರೆ ನಮೂನೆಯ ಗಿಡಗಳಿಂದ ಕೂಡಿದರೆಮಾತ್ರ ಅಡವಿಯಾಗುವದರಿಂದ ಅಡವಿಯ ಪೂರ್ಣ ವಿವರ ತಿಳಿಯುವದು ಬಲು ದೊಡ್ಡ ಕೆಲಸ ಮತ್ತು ಅವುಗಳ ಹೆಸರುಗಳನ್ನು ತಿಳಿದ ಮೇಲೂ ಕೂಡ, ಗಿಡಗಳ-ವನಸ್ಪತಿ ಶಾಸ್ತ್ರ, ವನಸ್ಪತಿ ಅಂಗ-ಶೋಧನೆ ಇತ್ಯಾದಿಗಳ ಬಗ್ಗೆ ಎಲ್ಲವನ್ನೂ ತಿಳಿಯುವದು ಅದಕ್ಕೂ ದೊಡ್ಡ ಕೆಲಸವಿರುತ್ತದೆ. ಸಂಶೋಧನೆಯು ಒಂದರ ಮೇಲೊಂದು ನಡದೇ ಇರುತ್ತದೆ. ಈ ಜ್ಞಾನದ ಒಂದು ಉತ್ತಮ ವೈಶಿಷ್ಟವೆನೆಂದರೆ, ಹೊಸ ಪದವೀಧರನಾಗಲು

Sri Vidyabharathi Book Centre, Sringeri

CC-0. In Public Domain. Digitized by eGangotri

ಯಾವಾಗಲೂ ವಿವಕ್ಷಾಶಬ್ದವಿದ್ದೇ ಇರುತ್ತದೆ. ಹಳೆಯ ಅಭಿಪ್ರಾಯವನ್ನು ವಿರೋಧಿಸುವುದು ಇಲ್ಲವೇ ತಿದ್ದುಮಾಡಿ ಹೊಸದನ್ನು ಮಂಡಿಸುವದೊಂದೇ ಎಲ್ಲರೂ ಮಾಡಬೇಕಾದ ಕೆಲಸ. ವಿವರ ಅಥವಾ ಭಾಗಗಳ ಜ್ಞಾನವು ವಿರೋಧ ಅಥವಾ ತಿದ್ದುಪಡಿಗಳ ಮೇಲೆ ಯಾವಾಗಲೂ ಅವಲಂಬಿಸಿರುತ್ತದೆ. ಕಾರಣ ಅರಣ್ಯದ ಪೂರ್ಣ ವಿವರಗಳನ್ನು ತಿಲಿಯುವದು ಸುಲಭವಲ್ಲ. ಆದರೆ ಅರಣ್ಯವನ್ನೇ ತಿಳಿಯದವನಿಗೆ ಪೂರ್ಣ ಅರಣ್ಯವನ್ನೇ ನಾವು ಅವರಿಗೆ ತೋರಿಸುವದಾದರೆ ಅದು ಸುಲಭವಾಗುತ್ತದೆ. ಅವನನ್ನು ಅಡವಿಯೊಳಗಿನಿಂದ ಎಟ್ಟಿಕೊಂಡು ಹೋಗಬೇಕು. ಬಹುಶಃ ಅವನನ್ನು ಒಮ್ಮೆಲೇ ಮೇಲಕ್ಕೆ ಏರುವ ವಿಮಾನದಲ್ಲಿ ಮೇಲೆ ಕರೆದುಕೊಂಡು ಹೋಗಿ ಕೆಳಗೆ ನೋಡಲು ಹೇಳಬೇಕಾದಷ್ಟೆ, ಅಂದರೆ ಅವನು ಅರಣ್ಯವು ಹೇಗೆ ಇರುವದೆಂಬುದನ್ನು ಸ್ಪಷ್ಟವಾಗಿ ನೋಡಬಹುದು ಮತ್ತು ಅಡವಿಯು ಹೇಗೆ ಇರುತ್ತದೆಂಬುದನ್ನು ಒಮ್ಮೆ

Sri Vidyabharathi Book Centre, Sringeri

CC-0. In Public Domain. Digitized by eGangotri
ತಿಳಿದರೆ ಪರಿಪೂರ್ಣ ಪ್ರಜ್ಞಾವಾದದಲ್ಲಿ ಅವಕಾಶ ಇರುವದಿಲ್ಲ. ಕಾರಣ ಜ್ಞಾನವು ಸಾಧ್ಯವಾದದ್ದೇ ಆದರೆ ಅದು ಪರಿಪೂರ್ಣವಾದ ಜ್ಞಾನವಿರುತ್ತದೆ. ಯಾವುದೇ ತರಹದ ಕೂಡಿಸುವಿಕೆ ಅಥವಾ ತಿದ್ದುಪಡಿ ಪೂರ್ಣಜ್ಞಾನದಲ್ಲಿ ಇರಲಾರದು. ಪೂರ್ಣತ್ವದ ವಿದ್ಯೆಯೇ ವಿದ್ಯೆ. ಯಾಕೆಂದರೆ ವಿದ್ಯೆ ಎಂದರೆ ಜ್ಞಾನ ಮತ್ತು ಜ್ಞಾನವು ಪೂರ್ಣತ್ವದ್ದು ಮಾತ್ರ ಸಾಧ್ಯವಿರುತ್ತದೆ. ಪೂರ್ಣತ್ವದಲ್ಲಿ ಭಾಗಗಳಿರುವದಿಲ್ಲ. ಭಾಗಗಳಿದ್ದಲ್ಲಿ ಅಜ್ಞಾನದ ಅಂಶವು ಪ್ರತಿಯೊಂದು ಭಾಗಗಳಲ್ಲಿರುತ್ತದೆ. ಪೂರ್ಣತ್ವದ ಜ್ಞಾನವು ನಿನ್ನಲ್ಲಿ ಇದ್ದಲ್ಲಿ ಪೂರ್ಣತ್ವವನ್ನು ಮತ್ತೊಬ್ಬನಿಗೆ ಅದನ್ನು ತೋರಿಸಲು ಸಾಧ್ಯವಾಗುತ್ತದೆ. ಪೂರ್ಣತ್ವವನ್ನು ಒಬ್ಬನು ತಿಳಿದದ್ದೇ ಆದರೆ ಅವನು ಪೂರ್ಣತ್ವವನ್ನು ಮತ್ತೊಬ್ಬನು ನೋಡುವಂತೆ ಮಾಡುತ್ತಾನೆ. ಮತ್ತೆ ಅವನು ಇನ್ನೊಬ್ಬ ನೋಡುವಂತೆ ಮಾಡುತ್ತಾನೆ. ಹೀಗೆ ಗುರುಗಳ ಮತ್ತು ಶಿಷ್ಯರ ಪೂರ್ಣ ಪರಂಪರೆಯನ್ನು ನೋಡುತ್ತೇವೆ. ಅಲ್ಲಿ ಪ್ರವಾಹವಿರುತ್ತದೆ.

CC-O. In Public Domain. Digitized by eGangotri

ಈಗ ಈ ಪೂರ್ಣತ್ವವು ನನ್ನಿಂದ ಬೇರೆಯಾಗಿರುವದಿಲ್ಲ. ನಿಶ್ಚಿತ ಪರಿಣಾಮದ ಒಂದು ಘಟವಿರುತ್ತದೆ. ''ನಾನು ಕೇವಲ 10 ಲೀಟರಿನ ಘಟಾಕಾಶವುಳ್ಳವನು'' ಎಂದು ವಿಚಾರಮಾಡಿದ್ದೇ ಆದರೆ, ಆಗ್ಗೆ ಅದು ಮತ್ತೊಂದು ದೊಡ್ಡ ಘಟಾಕಾಶವುಳ್ಳ ಪಾತ್ರೆಯನ್ನು ನೋಡಿ ದ್ವೇಷ ಪಡುವುದು ನಿಶ್ಚಿತ. ಹೀಗಾಗಿ ನಾನು ಎಷ್ಟು ಸಣ್ಣ ಪಾತ್ರೆ ಎನ್ನುವುದನ್ನು ನೆನಪು ಮಾಡಿಕೊಡುವ ಕಾರಣ ಅದು ಇದಕ್ಕೂ ಸಣ್ಣವಿರುವ ಘಟಾಕಾಶವುಳ್ಳ ಪಾತ್ರೆಗಳ ಸಹವಾಸವನ್ನೇ ಬಯಸುತ್ತದೆ. ನನ್ನಲ್ಲಿ ಸಹಜ ದ್ವೇಷವು ಇದ್ದ ಕಾರಣ ಯಾರೂ ಸಣ್ಣವನಿರಲು ಬಯಸುವದಿಲ್ಲ. ಈ 10 ಲೀಟರಿನ ಪಾತ್ರೆಯು 20 ಲೀಟರಿನ ಘಟಾಕಾಶವುಳ್ಳ ಪಾತ್ರೆಗೆ ಬದಲಾವಣೆಯ ಗತಿಯನ್ನು ಹೊಂದುವದೆಂದು ಹೇಳಿಕೊಳ್ಳೋಣ. ಈಗ ಅದು ಹೊಸ ಪಾತ್ರೆಗಳ ಗುಂಪಿನ ಸಹವಾಸವನ್ನು

Sri Vidyabharathi Book Centre, Sringeri

CC-0. Jangamwadi Math Collection. Digitized by eGangotri

ಇಟ್ಟುಕೊಳ್ಳಬಹುದು. ಆಗ ಅವನ ಪರಿಸ್ಥಿತಿಯ ತರಗತಿಯನ್ನು ಪಡೆಯುತ್ತದೆ. ಆದರೆ 30 ಲೀಟರಿನ ಘಟಾಕಾಶವುಳ್ಳ ಪಾತ್ರೆಯು ಯಾವಾಗಲು ಇರುತ್ತದೆ ಮತ್ತು 30 ಲೀಟರಿನ ಆಕಾಶವುಳ್ಳ ಆ ಪಾತ್ರೆಯು 30 ಲೀಟರಿನ ಆಕಾಶವುಳ್ಳ ಪಾತ್ರೆ ಆದದ್ದೇ ಆದರೆ, 50 ಲೀಟರಿನ ಆಕಾಶವುಳ್ಳ ಪಾತ್ರೆಯು ಇದ್ದೇ ಇರುತ್ತದೆ. ಸಾವಿರಾರು ಗ್ಯಾಲನ್ನು ಹಿಡಿಸಬಲ್ಲ ಟ್ಯಾಂಕುಗಳು ಇರುತ್ತವೆ. ಆದ್ದರಿಂದ ಈ ಅಗಲುವಿಕೆಯ ವೃತ್ತಿಗೆ ಕೊನೆಯಿಲ್ಲ.

20 ಲೀಟರ ಆಕಾಶ ಪಾತ್ರೆಯಾಗಬೇಕೆಂಬ ಇಚ್ಛೆಯನ್ನು ಹೊಂದಿದ ಒಂದು 10 ಲೀಟರ ಆಕಾಶ ಪಾತ್ರೆಯು ನಿಂತು, ಉಳಿದೆಲ್ಲ ಪಾತ್ರೆಗಳೂ ಈ ಆಗುವಿಕೆಯ ಹೆಚ್ಚು ಪ್ರವೃತ್ತಿಯನ್ನು ಹೊಂದಿದ್ದು ನೋಡಿದ್ದರಿಂದ ಹೀಗೆ ಕೇಳಿತು-''ನಾನು ನಿಜವಾಗಿಯೂ ಕೂಡ ಏನೋ ಆಗಬೇಕೋ ಅಥವಾ ನಾನು ಈ ಆಗುವಿಕೆಯ ಪ್ರಯತ್ನ ಮಾಡುವದು ಬಿಟ್ಟು ಮುಕ್ತನಾಗಬೇಕೋ? ಈ ಪ್ರಶ್ನೆಯು ಒಮ್ಮೆ ಎದ್ದರೆ,

CC-0. Public Domain. Digitized by eGangotri

ಅದಕ್ಕೆ ಉತ್ತರವಾಗಿ ಅವನು ಹೇಳಿದ್ದೇನೆಂದರೆ ದೊಡ್ಡ ಆಕಾಶವುಳ್ಳ ಪಾತ್ರೆಯು ಆಗುವದರಿಂದ ಯಾರೂ ಅನಂತಾಕಾಶವುಳ್ಳವರು ಆಗುವದಿಲ್ಲ. ಸಮಸ್ಯೆಯು, 10 ಲೀಟರವುಳ್ಳ ಆಕಾಶ ಪಾತ್ರೆಯು ನಾನು ಎಂಬುದು ಅಲ್ಲ. ನಾನು ಸಣ್ಣ ನಿರುವದೇ ಸಮಸ್ಯೆ. ನಾನು ಎಷ್ಟೇ ದೊಡ್ಡವನಾದಾಗ್ಯೂ ಕೂಡ ನಾನು ಯಾವಾಗಲೂ ಸಣ್ಣವನೇ ಇರುವೆನು. ನಾನು ದೊಡ್ಡವನೇ ಆಗಬೇಕಿದ್ದರೆ, ನನಗಿಂತ ಮತ್ತೊಂದು ದೊಡ್ಡದಿರದಷ್ಟು ದೊಡ್ಡವನಾಬೇಕು. ಈ ತರಹದ ದೊಡ್ಡತನವು ಈ ಆಗುವಿಕೆಯ ಪದ್ಧತಿಯಿಂದ ಎಂದಿಗೂ ಪಡೆಯಲಾಗದು. ನಿಜವಾಗಿಯೂ ಅಂತಹ ದೊಡ್ಡದು ಇದ್ದದ್ದೇ ಆದರೆ ಅದು ಆಗಲು ಸಾಧ್ಯವಿಲ್ಲ. ನಾನು ಅದೇ ಆಗಿರಬೇಕು ಅಥವಾ ಇಲ್ಲವೇ ಇಲ್ಲ-ಅದನ್ನು ನಾನು ತಿಳಿಯಬೇಕು.

ಇದು ಆಗ ಒಂದು ಹೊಸ ತರಹದ ಜ್ಞಾನವಾಗುತ್ತದೆ. ಮಗದೊಂದು ಆಕಾಶ ಪಾತ್ರೆಯನ್ನು ಕೇಳಿ, ಇದೇ ತರಹದ ಮೊದಲು ಇದ್ದ ಸಮಸ್ಯೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ನಿವಾರಿಸಿಕ್ಕೊಂಡಿದ್ದ ಇನ್ನೊಂದು ಆಕಾಶ ಪಾತ್ರೆಯನ್ನು ಈ ಸಣ್ಣ ಆಕಾಶ ಪಾತ್ರೆಯು ಕಿವಿಗೊಟ್ಟು ಆಲೈಸುತ್ತದೆ. ಸಣ್ಣನಾಗುವಿಕೆಯಿಂದ ನೀನು ಮುಕ್ತನಾಗಬೇಕೆನ್ನುತ್ತೀ; ಅನಂತನಾಗಬೇಕೆನ್ನುತ್ತಿ ಆದರೆ ಅನಂತವು ನಿನ್ನಿಂದ ಬೇರೆ ಇರಲಾರದು. ಅನಂತದಿಂದ ನೀನು ಬೇರೆ ಇದ್ದರೆ ಅನಂತವು ಪರಿಮಿತಿ ವುಳ್ಳದ್ದಾಗಿರುತ್ತದೆ. ಅನಂತವು ನಿನ್ನಿಂದ ಬೇರೆಯೇ ಆಗಿದ್ದರೆ ನೀನು ಅನಂತನ ಸೀಮೆಯನ್ನು ನಿರ್ಣಯಿಸಿದಂತಾಗುತ್ತದೆ'' ಎಂದು ಈ ಸಣ್ಣ ಆಕಾಶ ಪಾತ್ರೆಗೆ ಹೆಳಲ್ಪಟ್ಟಿದೆ.

ಘಟಾಕಾಶವು ಹೀಗೆ ವಿಚಾರಿಸಿತು- ''ನಾನು ಅನಂತವಾದ ಆಕಾಶದಿಂದ ಬೇರೆಯೇ ಆಗಿದ್ದರೆ ಆಗ ನಾನು ಅನಂತನಲ್ಲ. ಅಂದರೆ ಅನಂತವು ನನ್ನಿಂದ ಬೇರೆ ಇರುತ್ತದೆ. ಅನಂತವು ಒಂದು ಮತ್ತು ನಾನು ಬೇರೆ ಎಂದು ಅರ್ಥವಾಗುತ್ತದೆ. ಆದರೆ ಅದು ನನ್ನನ್ನು ಸೇರಿಕೊಳ್ಳದಿದ್ದರೆ ಆ ಅನಂತವು ಅನಂತನಾಗುವದು ನಿಂತು ಹೋಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆನಂತವೆಂಬುದು ಇದ್ದದ್ದೇ ಆದರೆ, ಪೂರ್ಣತ್ವವು ನನ್ನಿಂದ ಬೇರೆ ಇರಲಾರದು ಎಲ್ಲ ಪಾತ್ರೆಗಳು, ಗ್ರಹಗಳು, ಸೂರ್ಯಮಂಡಲಗಳು ಮತ್ತು ಆಕಾಶಗಂಗೆಯೂ ಕೂಡ ಇರುವಂತಹ ಅನಂತ ಆಕಾಶವು ನಾನು. ನಾನೊಬ್ಬನೇ ಅನಂತ ಆಕಾಶನು ಮತ್ತು ಗಡಿಗೆಯ ಗೋಡೆಯ ಮುಖಾಂತರ ಗಡಿಗೆಯ ಆಕಾಶ ಅಥವ ಆವರಣದ ಮುಖಾಂತರ ಯಾವಾಗ ನನ್ನನ್ನು ನೋಡಿಕೊಳ್ಳುತ್ತೇನೋ ಆವಾಗ್ಗೆ ಮಾತ್ರ ನಾನು ಪರಿಮಿತಿಗೆ ಒಳಪಟ್ಟಿರುತ್ತೇನೆಂದು ನನಗೆ ಅನಿಸುತ್ತದೆ. ಆದರೆ 'ನಾನು' ಇರುವುದು ಪರಿಮಿತಿಗೆ ಒಳಪಟ್ಟಿರುವದಿಲ್ಲ. ಅದೇ ಪಾತ್ರೆಯ ಇರುವಿಕೆಯಲ್ಲಿಯೇ ಆಕಾಶವು ಇರುತ್ತದೆ. ನನ್ನ ಪರವಾಗಿ, ಕಣ್ಣು ಪಿಳಕಿಸುವದೇ ಇರುವಿಕೆ ಚಲನವಲನವಿಲ್ಲದೇ ಇರುವರಿಂದ ನಾನು ಒಂದೇ ಆಕಾಶನಾಗಿರುತ್ತೇನೆ. ನಾನು ಪೂಣನೆಂಬುದನ್ನು ನಾನು ನೋಡುತ್ತೇನೆ."

"ನಾನು ಪೂರ್ಣ" ಎಂಬ ಶಿಕ್ಷಣವು ಋಷಿಗಳ

Sri Vidyabharathi Book Centre, Sringeri

CC-0. In Public Domain. Digitized by eGangotri

ದೃಷ್ಟಿ ಅಥವಾ ಜ್ಞಾನವಾಗುತ್ತದೆ. ಇದೇ ಆರ್ಷ ವಿದ್ಯೆ. ಋಷಿಗಳಿಂದ ಕೊಟ್ಟ ಜ್ಞಾನವು ಇದೊಂದೇ ಅಲ್ಲ. ಅವರು ಎಷ್ಟೋ ಕೊಟ್ಟಿದ್ದಾರೆ. ಆದರೆ ಇದೊಂದು ಎದ್ದು ಕಾಣಿಸುವಂತಹದು. ಮಂದ ಬುದ್ಧಿಯ ಮನುಷ್ಯನನ್ನು ಹಿಡಿದುಕೊಂಡು ಎಲ್ಲರನ್ನೂ ಕಣ್ಣುಸೊನ್ನೆ ಮಾಡಿ ಕರೆಯುವಂತಹದು. ಎಲ್ಲರ ಚಿತ್ತಹರಣವನ್ನೇ ಮಾಡುವಂತಹದು. ಆರ್ಷವಿದ್ಯೆ ಎಂಬ ಈ ಜ್ಞಾನವು ಹೆಚ್ಚು ಚಿತ್ತಾಕರ್ಷವೂ, ಬಹು ಆಶಾದಾಯಕವೂ, ಹೆಚ್ಚು ಲವಲವಿಕೆಯುಳ್ಳದ್ದೂ ಇರುತ್ತದೆ. ಒಮ್ಮೆ ಯಾವನು ಈ ವಿದ್ಯೆಯ ಲಾಭಪಡೆಯುವನೋ ಅವನು ಅದನ್ನು ಮತ್ತೊಬ್ಬನು ನೋಡುವ ಅವಕಾಶವನ್ನು ಕೂಡ ಮಾಡಿಕೊಡುತ್ತಾನೆ.

CC-O. In Public Domain. Digitized by eGangotri

ಪೂರ್ಣತ್ವದ ದೃಷ್ಟಿಯನ್ನು ಬೇರೆಯವರಿಗೆ ಹೇಳಿಕೊಡುವದಕ್ಕೋಸ್ಕರ ಶಿಕ್ಷಣದ ಮತ್ತು ತಿಳಿಸುವಿಕೆಯ ಕ್ರಮವು ಇರುತ್ತದೆ. ಆ ಈಶ್ವರನಿಂದ ಪ್ರಾರಂಭವಾಗಿ ಋಷಿಗಳ ಮುಖಾಂತರ ನಮ್ಮವರಿಗೂ ಬರುವಂತಹ ಸಂಪ್ರದಾಯವು ನಮ್ಮಲ್ಲಿರುತ್ತದೆ. ಸಂಪ್ರದಾಯವು ಯಾವಾಗಲೂ ಒಂದೇ ನಮೂನೆಯ-ದಾಗಿರುತ್ತದೆ. ಪೂರ್ಣತ್ವದ ವ್ಯವಹಾರ ಕೈಕೊಂಡಿದ್ದರಿಂದ ಅದರಲ್ಲಿ ಯಾವುದೇ ತರಹದ ಬದಲಾವಣೆಯು ಆಗಿಲ್ಲ. ಭಾಗಗಳ ಜ್ಞಾನಕ್ಕೆ ಇದು ಸರ್ವಥಾ ಅನ್ವಯಿಸುವದಿಲ್ಲ. ಉದಾಹರಣಾರ್ಥವಾಗಿ ಭೌತಿಕ ಶಾಸ್ತ್ರದ ಜ್ಞಾನವು ವೇದಗಳಲ್ಲಿ ನಿಶ್ಚಯವಾಗಿಯೂ ಬೇಕಾಗಿರುತ್ತದೆ. ಆಧುನಿಕ ವಿದ್ಯೆಯು ಹಳೆಯ ಕಾಲದ ನಂಬಿಕೆಗಳಿಗೆ ಹೋಲಿಸಿದರೆ, ಕ್ಷುಲ್ಲಕವೆಂದು ತಿಳಿಯಬಹುದೆಂದು ನನಗೆ ಖಾತ್ರಿ ಆದೆ. ಭೌತಿಕ ಶಾಸ್ತ್ರದಲ್ಲಿ ಋಷಿಗಳ ವಿಷಯವಿದ್ದಿಲ್ಲ. ನೀನು ಯಾವಾಗಲೂ ಉತ್ಪತ್ತಿಯ

Sri Vidyabharathi Book Centre, Sringeri

CC-O. In Public Domain. Digitized by eGangotri
ವಿವರಗಳ ಬಗ್ಗೆ ಅಲ್ಲಗಳೆಯಬಹುದು. ಮತ್ತು ಅದು ಇಂದಿಗೂ ಕೂಡ ಹಾಗೆಯೇ ಇರುತ್ತದೆ. ಒಮ್ಮೆ ಯಾವುದು ಸರಿ ಎಂದು ತಿಳಿದಿರುತ್ತದೋ, ಮತ್ತೊಂದು ಹೊತ್ತಿಗೆ ಅದು ಹಾಗೆಯೇ ತಿಳಿಯಲಾಗದು. ಆದಕಾರಣ ಪೂರ್ಣತ್ವ ಜ್ಞಾನ ಮಾತ್ರ ಯಾವ ಬದಲಾವಣೆಯ ಅವಶ್ಯವಿಲ್ಲದೇ ಕೆಳಗಿನವರೆಗೆ ಕೊಡಬಹುದಾದ ಜ್ಞಾನವು. ಈ ರೀತಿಯ ಪರಂಪರೆ ಅಥವಾ ಸಂಪ್ರದಾಯವು ನಮ್ಮಲ್ಲಿರುತ್ತದೆ.

ಪ್ರತಿಯೊಂದು ವಿದ್ಯೆಯ ಕ್ಷೇತ್ರದಲ್ಲಿ ಯಾವಾಗಲೂ ಗುರು-ಶಿಷ್ಯ ಪರಂಪರೆಯು ಇರುತ್ತದೆ. ನೀನು ಭೌತಿಕ ಶಾಸ್ತ್ರವನ್ನು ನಿನ್ನ ಅಧ್ಯಾಪಕನಿಂದ ಕಲಿತಿರುತ್ತೀ. ಮತ್ತು ಈಗ ನೀನು ಅಧ್ಯಾಪಕನಾಗಿರುತ್ತೀ; ಆದರೆ ಈ ಒಳಗಾಗಿ ಅಧ್ಯಾಪಕನಿಂದ ಕಲಿತ ಎಷ್ಟೋ ವಿಷಯಗಳು ಸುಳ್ಳಾಗಿ ಪರಿಣಮಿಸಲ್ಪಟ್ಟಿವೆ. ಈ ಕಾರಣದಿಂದ ಭೌತಿಕ ಜ್ಞಾನವೂ ಕೂಡ ಸರಿಯಾಗಿ ಕೊಡಲ್ಪಟ್ಟಿಲ್ಲ. ಯಾರು ಸಂಗೀತ, ನೃತ್ಯ, ಭಾಷೆ

CC-0. In Public Domain. Digitized by eGangotri

ಅಥವಾ ಯಾವುದೇ ವಿಷಯವಿರಲಿ, ಯಾರು ಇದನ್ನು ತಿಳಿಸಿಕೊಡುವರೋ ಅವರಿಗೆ "ಗುರು" ಎಂಬ ಶಬ್ದವನ್ನು ಉಪಯೋಗಿಸಬಹುದು.

ಯಾರು ಮೂಢತ್ವವನ್ನು ತೆಗೆದು ಹಾಕುವರೋ ಅವರಿಗೆ "ಗುರು" ಎನ್ನುವರು. ಆದ್ದರಿಂದ ಯಾವುದೇ ತರಹದ ಅಜ್ಞಾನವನ್ನು ಹೊಗಲಾಡಿಸುವವರು "ಗುರು" ಎಂದು ಕರೆಯಲ್ಪಡುತ್ತಾರೆ. ಆದರೆ ಯಾವದೇ ವಿಷಯವು ಪೂರ್ಣ ಅಜ್ಞಾನವನ್ನು ತೆಗೆದು ಹಾಕುವದಿಲ್ಲ. ಎಲ್ಲರೂ ಕೆಲ ಮಟ್ಟಿಗೆ ಅಜ್ಞಾನವನ್ನು ಹೋಗಲಾಡಿಸುವರು. ವಸ್ತುತಃ ನಮಗೆ ಗೊತ್ತು ಇಲ್ಲದೇ ಇರುವದನ್ನು ನಾವು ಹೆಚ್ಚು ಶೋಧ ಮಾಡಿರುವೆವೆಂದು ನಾವು ಹೆಚ್ಚು ಹೆಚ್ಚು ಕಲಿತಾಗ್ಗೆ ಈ ಎಲ್ಲ ಕಟಿಬದ್ಧವಾದ ಜ್ಞಾನದಲ್ಲಿ ಕಂಡುಹಿಡಿಯುತ್ತೇವೆ. ಹೀಗಾಗಿ ಅನುಭವ ಸಿದ್ಧ ಜ್ಞಾನವಿರುವ ಯಾವದೇ ಶಿಕ್ಷಕರು, ಅಜ್ಞಾನವನ್ನು ಪೂರ್ಣ ಹೋಗಲಾಡಿಸದೇ ಇರುವದರಿಂದ ಅವರನ್ನು ನಿಜವಾದ ಅರ್ಥದಲ್ಲಿ ಗುರು

Sri Vidyabharathi Book Centre, Sringeri

ಎಂದು ಕರೆಯಲಾಗದು. ಕಾರಣ ಪೂರ್ಣವಾಗಿ
CC-O. In Public Domain. Digitized by eGangotri
ಮೂಢತ್ವವನ್ನು ತೆಗೆದು ಹಾಕುವವನು ಇದ್ದಲ್ಲಿ, ಪೂರ್ಣತ್ವವನ್ನು ಯಾರು ಕಲಿಸುವರೋ ಅವರಿಗೆ ಮಾತ್ರ ಗುರು ಎಂದು ಕರೆಯಬಹುದು. ಯಾಕೆಂದರೆ ಪೂರ್ಣತ್ವದ ಅಜ್ಞಾನವು ಒಂದೇ ಅಜ್ಞಾನವಾಗಿರುತ್ತದೆ. ಆ ಪೂರ್ಣತ್ವದಲ್ಲಿ ಭಾಗಗಳು ಇರುವದಿಲ್ಲ. ಆದ್ದರಿಂದ ಯಾರು ಪೂರ್ಣತ್ವದ ಅಜ್ಞಾನವನ್ನು ತೆಗೆದು ಹಾಕುವರೋ ಅವರನ್ನು ಮಾತ್ರ ನಿಜವಾದ ಅರ್ಥದಲ್ಲಿ ಗುರು ಎಂದು ಕರೆಯಬಹುದು. ಪೂರ್ಣ ಜ್ಞಾನಕ್ಕೆ ಒಂದೇ ಒಂದು ಬಲವಾದ ಸಾಧನೆಯಿರುತ್ತದೆ. ಮತ್ತು ಅದೇ ಪೂರ್ಣ ಜ್ಞಾನದ ಉತ್ಪತ್ತಿಗೆ ಕಾರಣವಾಗುತ್ತದೆ. ಅದಕ್ಕೆ ಪ್ರತಿಯಾದ ಮತ್ತೊಂದು ಜ್ಞಾನವು ಇರಲಾರದು. ಮತ್ತು ಅದು ಎಂದೂ ಸುಳ್ಳಾಗಲಾರದು. ಒಮ್ಮೆ ತಿಳಿದರೆ ಅದೇ ಕಲ್ಯಾಣಕರವಾಗುತ್ತದೆ.

ನಮ್ಮ ಋಷಿಗಳ ಮೇಲೆ ಈ ಜ್ಞಾನದ ಕೃಪೆ ಇತ್ತು. ಇದು ಆ ಪರಮಾತ್ಮನಿಂದಲೇ ಅವರಿಗೆ

Sri Vidyabharathi Book Centre, Sringeri

CC-0. Mumukshu Bhawan Varanasi Collection. Digitized by eGangotri
ಕೊಡಲ್ಪಟ್ಟಿರುವುದೋ ಅದೇ ಉಪಲಬ್ಧಿಯಾಗಿದೆ. ಜ್ಞಾನವು ಯಾವ ಕಾಲಕ್ಕೂ ಇರುವದರಿಂದ ಅದನ್ನು ಯಾರು ಹುಟ್ಟಿಸಿಲ್ಲ.

ಯಾವದೇ ಉತ್ಪತ್ತಿಯು ಅದರ ಪೂರ್ವದಲ್ಲಿ ಅದರ ಜ್ಞಾನವಿರಲೇಬೇಕೆಂದು ಸೂಚಿಸುತ್ತದೆ. ಮತ್ತು ಆ ಜ್ಞಾನವು ಅರಿವು ವುಳ್ಳವನಲ್ಲಿಯೇ ಇರಬೇಕು. ಗಡಿಗೆಯನ್ನು ಬಟ್ಟೆಯ ಜ್ಞಾನದಿಂದ ಹುಟ್ಟಿಸಲು ಸಾಧ್ಯವಿಲ್ಲದ್ದರಿಂದ ಜ್ಞಾನವೂ ಕೂಡ ಸೃಷ್ಟಿಯಷ್ಟೇ ಉತ್ತಮವಾಗಿರಬೇಕು. ಗಡಿಗೆಯನ್ನು ಸೃಷ್ಟಿ ಮಾಡುವದಕ್ಕೋಸ್ಕರ ಗಡಿಗೆ ಏನು ಎಂಬುದನ್ನು ಅವನು ಅವಶ್ಯವಾಗಿ ತಿಳಿದಿರಬೇಕು. ಮೊಟ್ಟಮೊದಲು 'ಶಬ್ದ' ಎಂಬುದು ಇತ್ತು. 'ಶಬ್ದ' ಎಂದರೆ ಜ್ಞಾನ, ಸಮಗ್ರ ಸೃಷ್ಟಿಯ ಜ್ಞಾನ. ಜ್ಞಾನವು ಅರಿವುಳ್ಳವನಲ್ಲಿ ಇರಬೇಕಾದುದರಿಂದ ಆ ಸೃಷ್ಟಿಕರ್ತನು ಅರಿವುಳ್ಳವನಾಗಿ ಇರಬೇಕು. ಹೀಗಾಗಿ ಸೃಷ್ಟಿಕರ್ತನು ಇದ್ದದ್ದೇ ಆದರೆ ಆ ಸೃಷ್ಟಿಕರ್ತನಲ್ಲಿ ಎಲ್ಲ ಜ್ಞಾನವೂ ಇರಲೇಬೇಕು. ಆದ್ದರಿಂದ ಜ್ಞಾನವು ಸೃಷ್ಟಿಯ ಮೊದಲೇ ಇರುತ್ತದೆ

Sri Vidyabharathi Book Centre, Sringeri

CC-0. In Public Domain. Digitized by eGangotri

ಮತ್ತು ಅಜ್ಞಾನವು ಸೃಷ್ಟಿಯು ಆದ ಮೇಲೆಯೂ ಕೂಡ ಇರುತ್ತದೆ.

ಹೀಗಾಗಿ ಜ್ಞಾನ ಮತ್ತು ಅಜ್ಞಾನವು ಸಹ ಇರುತ್ತವೆ. ಅವು ಎರಡೂ ಹೊಂದಿಕೊಂಡಿರುವಂತೆಯೇ ಕಾಣುತ್ತವೆ. ಅಜ್ಞಾನದ ಕಾರಣದಿಂದ ಜ್ಞಾನವು ಯಾವಾಗಲೂ ಇದ್ದರೂ ಕೂಡ ನಮಗೆ ಲಭಿಸುವದಿಲ್ಲ. ಅಜ್ಞಾನವನ್ನು ತೆಗೆದಾಗೊಮ್ಮೆ ಏನು ಇರುತ್ತದೆಂಬುದನ್ನು ನಾವು ಬೆಳಕಿಗೆ ತರುತ್ತೇವೆ. ಅಜ್ಞಾನದಲ್ಲಿಯೇ ಪ್ರತಿಯೊಬ್ಬನೂ ಹುಟ್ಟಿರುತ್ತಾನೆ. ಮತ್ತು ಅದನ್ನು ಕಳೆದುಕೊಳ್ಳುವ ಪ್ರಯತ್ನವನ್ನು ಯಾವಾಗಲೂ ಮಾಡುತ್ತಿರುತ್ತಾನೆ. ಪೂರ್ಣತ್ವದ ಜ್ಞಾನವು ಇರುವಂತೆಯೇ ಎಲ್ಲ ತರಹದ ಜ್ಞಾನವು ಯಾವಾಗಲೂ ಇರುತ್ತದೆ. ಗುರುವಿನ ಕೆಲಸವೇ ಅಜ್ಞಾನವನ್ನು ತೆಗೆದು ಹಾಕುವದು. ಸೃಷ್ಟಿಕರ್ತನಾದ ಪರಮಾತ್ಮನೇ ಮೊದಲನೆಯ "ಗುರು" ಆಗಿರುತ್ತಾನೆ. ಆ ಪರಮಾತ್ಮನಿಂದಲೇ ಎಲ್ಲವೂ ಪ್ರಾರಂಭವಾಗುತ್ತದೆ.

CC-0. Mumukshu Bhawan Varanasi Collection. Digitized by eGangotri
ಋಷಿಗಳು ತಮಗೆ ಬಂದಂತೆ ಮಾತ್ರ ನಮಗೆ ತಲುಪಿಸಿರುವುದರಿಂದ ಅದನ್ನು ಸುಲಭವಾಗಿ ಸದಾಶಿವನಾದ ಪರಮಾತ್ಮ ಅಥವಾ ದಕ್ಷಿಣಾಮೂರ್ತಿಗೆ ಸರಳವಾಗಿ ಜೋಡಿಸುತ್ತೇವೆ. ಋಷಿಗಳಿಗೆ ಮೊದಲು ಈ ಜ್ಞಾನವು ಹೆಳಲ್ಪಟ್ಟಿದೆ. ಆಮೇಲೆ ಅದು ನಮ್ಮ ತನಕ ಹರಿದು ಬರುತ್ತದೆ. ಆದ್ದರಿಂದ ಈ ವಿದ್ಯೆಯು "ಆರ್ಷವಿದ್ಯೆ" ಯೆಂದು ಕರೆಯಲ್ಪಟ್ಟಿದೆ. ಋಷಿಗಳ ದೃಷ್ಟಿಯೇ ಈ ವಿದ್ಯೆ.

ಋಷಿಗಳ ವಾಕ್ಯಗಳೆ ವೇದಗಳು. ಆದ್ದರಿಂದ ಋಷಿಗಳ ದೃಷ್ಟಿಯೇ ವೇದಗಳ ದೃಷ್ಟಿ. ವೇದಗಳಿಗೆ ಜೀವನದ ದೃಷ್ಟಿ ಅಥವಾ ಉದ್ದೇಶ ಮತ್ತು ಒಂದು ಜೀವನದ ಪದ್ದತಿಯೂ ಇರುತ್ತದೆ. ನೀನು ಪೂರ್ಣನಾಗಿರುವದೇ ವೇದಗಳ ಅಭಿಪ್ರಾಯ. ಜೀವನದ ಪದ್ಧತಿಯೆಂದರೆ ಸರಿಯಾದ ಮನೋಭಾವನೆ ಮತ್ತು ಯೋಗ್ಯತೆಯುಳ್ಳ ಜೀವನದ ಶೈಲಿ; ಅದು ನೀನು ಪೂರ್ಣನೆಂದು ತಿಳಿದುಕೊಳ್ಳಲು ಸಹಾಯ ಮಾಡುತ್ತದೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ಮನುಷ್ಯನಿಗೆ ತನ್ನ ಅರಿವು ಇದೆ. ಪ್ರತಿಯೊಬ್ಬನಲ್ಲಿ ತನ್ನ ಮತ್ತು ಜಗತ್ತಿನ ಅರಿವು ಕೂಡ ಇರುತ್ತದೆ. ತನ್ನ ಅರಿವುಳ್ಳವನಾದ್ದರಿಂದ ಪ್ರತಿಯೊಬ್ಬನು ತನ್ನ ಬಗ್ಗೆ ಮತವನ್ನು ಹೊಂದಿರುವುದು ನಿಶ್ಚಿತ ಮತ್ತು ಅದನ್ನು ತಪ್ಪಿಸಲಿಕ್ಕಾಗುವದಿಲ್ಲ ಮತ್ತು ಆ ನಿರ್ಣಯವು ಸರಿ ಇರಬಹುದು ಅಥವಾ ಇರಲಾರದು. ಈ ಸಿದ್ಧಾಂತವು ಸಾರ್ವತ್ರಿಕವಾಗಿದ್ದರೂ ಕೂಡ ಅದು ಸರಿ ಎಂದು ಹೇಳಲಿಕ್ಕೆ ಬರುವದಿಲ್ಲ. ಅದು ಈ ವಿಶ್ವದ ಜ್ಞಾನವಾಗಿರಬಹುದು ಅಥವಾ ಅಜ್ಞಾನ-ವಾಗಿರಬಹುದು. ಹಿಂದಿನ ಕಾಲದಲ್ಲಿ ಸೂರ್ಯನು ಪೂರ್ವದಲ್ಲಿ ಹುಟ್ಟಿ ಪೂರ್ವ ದಿಕ್ಕಿನಿಂದ ಪಶ್ಚಿಮ ದಿಕ್ಕಿಗೆ ಹೋಗುತ್ತಿದ್ದಾನೆಂಬುದು ಜನರ ತಿಳುವಳಿಕೆ ಆಗಿತ್ತು. ಆದರೆ ಇದು ಸಾರ್ವತ್ರಿಕ ಅಜ್ಞಾನ. ಇದೇ ಪ್ರಕಾರ ನಾನು ಸಣ್ಣವನು, ಬದ್ಧನು, ಕೊರತೆಯುಳ್ಳವನು,

CC-0. In Public Domain. Digitized by eGangotri

ಮಿತಿಯುಳ್ಳವನು ಮತ್ತು ನಿಬಂಧನೆಯೆಂದು ಪ್ರತಿಯೊಬ್ಬನೂ ತನ್ನ ಬಗ್ಗೆ ನಿರ್ಣಯಕ್ಕೆ ಬಂದಿದ್ದಾನೆ. ಇದರ ಪರಿಣಾಮವಾಗಿ ತಾನು ತನ್ನ ಬಗ್ಗೆ ಅಸಮಾಧಾನಿಯೂ ಮತ್ತು ಅಸಂತುಷ್ಟನೂ ಆಗಿರುತ್ತಾನೆ ಮತ್ತು ಈ ನಿರ್ಣಯದಿಂದ ಪಾರಾಗಲು ಹೋರಾಟ ನಡೆದಿರುತ್ತದೆ.

ಮೇಲಿಂದ ಮೇಲೆ ಪ್ರತಿಯೊಬ್ಬನೂ ಈ ನಿರ್ಣಯದಿಂದ ಹೊರ ಬರಲು ಪ್ರಯತ್ನಿಸುತ್ತಿರುತ್ತಾನೆ. ಅದು ಯಾವಾಗ? ತನ್ನ ಕಲ್ಪನಾಶಕ್ತಿಯ ಹಿಡಿತಕ್ಕೆ ಬಿದ್ದು ತನ್ನ ಅದ್ಭುತ ಅನುಭವದಿಂದ ತನ್ನನ್ನು ತಾನೇ ಮರೆತಾಗ್ಗೆ, ಮನುಷ್ಯನು ತನ್ನ ವಿಚಾರ ಉದ್ವೇಗಗಳಿಗೆ ತಾತ್ಪೂರ್ತಿಕವಾಗಿ ವಶನಾಗುತ್ತಾನೆ ಮತ್ತು ತನ್ನ ಬಗ್ಗೆ ಹೊಂದಿರುವ ಎಲ್ಲ ನಿರ್ಣಯಗಳನ್ನು ಮತ್ತು ತೊಡಕುಗಳನ್ನು ಮರೆಯುತ್ತಾನೆ. ಆವಾಗ್ಗೆ ತಾನು ಸಂತೋಷಪಡುವದಲ್ಲದೇ ಕ್ರಿಮಿ-ಕೀಟಕ ಮೊದಲಾದ ಪ್ರಾಣಿಗಳ ವಿಷಯಗಳಲ್ಲಿಯೂ ಸಂತೋಷಪಡುತ್ತಾನೆ.

Sri Vidyabharathi Book Centre, Sringeri

CC-0. In Public Domain. Digitized by eGangotri

ನನ್ನನ್ನು ನಾನು ಮರೆತಾಕ್ಷಣ ನಾನು ಸುಖಿಯಾಗುತ್ತೇನೆ; ಮತ್ತೆ ನನ್ನನ್ನು ನಾನು ನೆನೆಸಿಕೊಂಡಾಗ್ಗೆ ನಾನು ದುಃಖಿಯಾಗುತ್ತೇನೆ. ನಾನು ನನ್ನ ಇಡೀ ಜೀವನವನ್ನು ನನ್ನನ್ನು ಮರೆಯುವ-ದಕ್ಕೋಸ್ಕರವೇ ಕೆಲಸಮಾಡುತ್ತೇನೆ. ಮತ್ತು ನಾನು ಆ ಬಗ್ಗೆ ನನ್ನ ವೇಳೆಯನ್ನು, ಹಣವನ್ನು ವ್ಯಯಮಾಡುತ್ತೇನೆ. ನಾನು ನನ್ನನ್ನು ಮರೆಯುವದರ ಅನುಭವ ಪಡೆಯುವ ಬಗ್ಗೆ ನಿರಂತರವಾಗಿ ದುಡಿಯುತ್ತಿರುತ್ತೇನೆ. ನಾನು ಅನುಭವವುಳ್ಳ ಒಬ್ಬ ಬೇಟೇಗಾರ ಮತ್ತು ನಾನು ಸ್ವಾಮೀಜಿಯವರ ಕಡೆಗೆ ಹೋದಾಗೊಮ್ಮೆ ಕೂಡ ಇದನ್ನೇ ನಾನು ಕೇಳುತ್ತೇನೆ. ಆಧ್ಯಾತ್ಮಿಕ ಜೀವನವು ಬೇರೆ ಮತ್ತೊಂದು ಅನುಭವವೇ ಆಗುತ್ತದೆ.

ನೀನು ಸುಖಿಯಾಗಿರುವಾಗ ಏನು ಅನಿಸುತ್ತದೆ? ನೀನು ಕೈಯಲ್ಲಿ ಒಂದು ಮಗುವನ್ನು ಕರೆದುಕೊಂಡಾಗ ಆನಂದದಲ್ಲಿರುತ್ತೀ. ಆ ಕ್ಷಣದಲ್ಲಿ ಈ ಜಗತ್ತೇ

CC-0. In Public Domain. Digitized by eGangotri

ಅಲ್ಲಿರುತ್ತದೆ. ನೀನು ಎದುರಿಸುತ್ತಿರುವದೇ ನಿನ್ನ ಜಗತ್ತು ಆಗಿರುತ್ತದೆ. ಆ ಮಗುವೇ ಆ ಕ್ಷಣದಲ್ಲಿ ನಿನ್ನ ಪೂರ್ಣ ಜಗತ್ತು ಆಗಿರುತ್ತದೆ ಮತ್ತು ಅದು ಅಲ್ಲೇ ಇರುತ್ತದೆ. ನಿನ್ನ ಮನಸ್ಸು ಅಲ್ಲಿರುತ್ತದೆ, ನೀನು ಅಲ್ಲಿರುತ್ತಿ. ನಿನ್ನ ಬಿಡಿಸಲಾರದ ಎಲ್ಲ ಸಮಸ್ಯೆಗಳು ಕೂಡ ಅಲ್ಲಿರುತ್ತವೆ. ಆ ಕ್ಷಣದಲ್ಲಿ ಯಾವದೂ ಅಲ್ಲಿಂದ ನಿಜವಾಗಿ ಮಾಯವಾಗಿರುವದಿಲ್ಲ. ಆದರೂ ಕೂಡ ನೀನು ಸುಖಿಯಾಗಿರುತ್ತಿ. ಆ ಕ್ಷಣದಲ್ಲಿ ಅಲ್ಲಿ ಏನು ಇರುತ್ತದೆ? ಪೂರ್ಣ ಅಖಂಡ. ನೀನು ಮತ್ತು ನೀನು ಎದುರಿಸುತ್ತಿರುವ ಈ ಜಗತ್ತಿನ ಮಧ್ಯದಲ್ಲಿ ಯಾವ ವಿಭಾಗಿಸುವ ರೇಖೆಯೂ, ಇರುವದಿಲ್ಲ. ಅದು ಸಂಗೀತ, ನೃತ್ಯ, ಸೂರ್ಯ, ಆಕಾಶ, ಕವಿತೆ, ರೇಷೆ, ಕ್ಷುಲಕ ನಗೆ ಮತ್ತು ವ್ಯಂಗ್ಯ ಚಿತ್ರವೇ ಆಗಿರಲಿ- ಅದು ಯಾವದೇ ಇಂದ್ರಿಯ ಅನುಭವವೇ ಆಗಿರಬಹುದು. ನೀನು ಏನನ್ನಾದರೂ ಪ್ರೀತಿಸುತ್ತಿರುವಾಗ್ಗೆ ನಿನ್ನ ಮತ್ತು ನೀನು

Sri Vidyabharathi Book Centre, Sringeri

CC-0. In Public Domain. Digitized by eGangotri

ಪ್ರೀತಿಸಂತೃಪ್ತಿಯಾವ ವಸ್ತುವಿನ ಮುಖಾಂತರವೂ ಯಾವ ಪ್ರತಿಬಂಧವೂ ಅಲ್ಲಿ ಬರುವದಿಲ್ಲ. ನೀನು ಯಾವ ವಸ್ತುವನ್ನು ಪ್ರೀತಿಸುವದಿಲ್ಲವೋ, ಆ ವಸ್ತುವು ಇರುವ ರೀತಿಗಿಂತ ಬೇರೆ ತರಹ ಇರಬೇಕಾಗಿತ್ತೆಂದು ಯಾವಾಗ್ಗೆ ನೀನು ಬಯಸುವಿಯೋ, ಆವಾಗ್ಗೆ ನಿನ್ನ ಮತ್ತು ನೀನು ಎದುರಿಸಬೇಕಾಗುವ ವಸ್ತುವಿನ ನಡುವೆ ನಿನ್ನ ವ್ಯಕ್ತಿತ್ವದ ಹಕ್ಕು ಅಡ್ಡ ಬರುತ್ತದೆ. ನಿನ್ನ ಬೇಡಿಕೆಗಳ ತೊಡಕುಗಳ ವ್ಯಕ್ತಿತ್ವದ ಮರುವು ನಿನ್ನಲ್ಲಿ ಸ್ವಲ್ಪ ಹೊತ್ತು ಯಾವಾಗ್ಗೆ ಆಗುತ್ತದೋ, ಆಗ್ಗೆ ಅಲ್ಲಿರುವದು ನೀನೇ ನೀನು ಆಗಿರುವಿ. ಅಲ್ಲಿ ವಿಭಾಗ ಮಾಡುವದಕ್ಕೆ ಏನೂ ಇರುವದಿಲ್ಲ. ಅದೇ ನೀನು-''ಪೂರ್ಣನು'' ಆಗಿರುತ್ತೀ. ''ನೀನು ಪೂರ್ಣ''ನೆಂದು ವೇದಗಳು ಘೋಷಿಸುತ್ತವೆ. ನೀನು ಮೂಲತಃ ಪೂರ್ಣನೇಆಗಿರುವದರಿಂದ, ನಿನ್ನ ಜೀವನವು ಆ ಪೂರ್ಣತ್ವವನ್ನೇ ಶೋಧಿಸುವದಾಗಿರಬೇಕು. ನಿನ್ನ ಇರುವಿಕೆಯಲ್ಲಿಯೇ ನೀನು ಸಂತುಷ್ಟನಾಗಿ ಇರಬೇಕು.

Sri Vidyabharathi Book Centre, Sringeri

ಅವನ ಜೀವನವನ್ನು ಬಾರು ಮಾಡಿಕೊಂಡಿರುತ್ತಾನೆ. ಯಾರು ತನ್ನನ್ನೇ ತಾನು ಅರಿತು ಸ್ವೀಕರಿಸಿದ್ದಾನೊ ಅವನೇ ತನ್ನ ಜೀವನವನ್ನು ಂಟು ಮಾಡಿಕೊಂಡಿರುತ್ತಾನೆ. ಪ್ರತಿಯೊಬ್ಬನೂ ತನ್ನ ಜೀವನವನ್ನು ಮಾರ್ಪಾಡಿಸಿಕೊಳ್ಳಬೇಕು ಎನ್ನುತ್ತಾನೆ. ಆದ್ದರಿಂದ ಅವನು ಪೂರ್ಣತ್ವವನ್ನು ಸಂಶೋಧಿಸುವ ಬಗ್ಗೆ ಸಹಾಯ ಮಾಡುವ ವಿಧಾನವನ್ನು ಅನುಸರಿಸಬೇಕಾಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಣ, ಅಧಿಕಾರ ಇತ್ಯಾದಿ ಇವುಗಳು ಜೀವನದ ಸರಕುಗಳೇ ಹೊರತು ಅವುಗಳನ್ನು ಪಡೆಯುವದೇ ಜೀವನದ ಒಂದು ಗುರಿಯಾಗಿರುತ್ತದೆ. ಈ ಗುರಿಯನ್ನು ಮುಟ್ಟಲು ಸಹಾಯ ಮಾಡುವ ಇಂತಹ ವಿಧಾನಗಳನ್ನೇ ನಾವು ಆರಿಸಿಕೊಳ್ಳುತ್ತೇವೆ. ಜೀವನ ಗುರಿಯು, ಇದೊಂದು ಆಗಲಿ ಅಥವಾ ಅದೊಂದು ಆಗಲಿ ಇರುವದಿಲ್ಲ ಎಂದು ವೇದಗಳು ಹೇಳುತ್ತವೆ. **ಜೀವನದ ಗುರಿಯು ಪೂರ್ಣತ್ವವನ್ನು ಹುಡುಕುವದೇ ಆಗಿರುತ್ತದೆ.** ಮತ್ತು ನೀನು ಅದೇ ಆಗಿರುವದರಿಂದ ಮತ್ತೊಮ್ಮೆ ಆಗುವ ಪ್ರಶ್ನೆಯೇ ಇಲ್ಲ. ಆ ಪೂರ್ಣತ್ವವನ್ನು ಅರಳಿಸುವ ಪ್ರವೃತ್ತಿಯೇ ಆ ಜೀವನದ್ದಾಗಬೇಕು. ಆ ಪೂರ್ಣತ್ವವನ್ನು ಹುಡುಕುವ ಮನಸ್ಸು ನಿನ್ನಲ್ಲಿರಬೇಕು. ಆ ಮನಸ್ಸು ಸರಳವೂ, ಏಕಾಗ್ರತೆಯುಳ್ಳದ್ದೂ, ಶಾಂತಿಯುತವೂ

CC-0. In Public Domain. Digitized by eGangotri
ಮತ್ತು ತಪ್ಪನ್ನೂ ಕೂಡ ಆಗಿರಬೇಕು. ಇದ್ದು ರುಚಿ ಮತ್ತು ಆರುಚಿಗಳ ಹಿಡಿತದಲ್ಲಿರಬಾರದು. ಯಾಕೆಂದರೆ ಅವು ನೀನು ಸಂತುಷ್ಟನೋ ಅಥವಾ ಅಸಂತುಷ್ಟನೋ ಎಂಬುದನ್ನು ನಿರ್ಧರಿಸುತ್ತದೆ. ಮನಸ್ಸು ಉದ್ರಿಕ್ತವೂ, ಚಂಚಲವೂ, ದುಃಖಿಯೂ ಆಗಿದ್ದರೆ ಅದು ಯಾವದರ ಸಲುವಾಗಿ ಇರುತ್ತದೋ ಆ ಉದ್ದೇಶವನ್ನು ಪಡೆಯಲು ಸಮರ್ಥವಾಗುವದಿಲ್ಲ.

ಮನಸ್ಸು ಜ್ಞಾನದ ಸಾಧನವಾಗಿದೆ. ತನ್ನ ಬೆಳವಣಿಗೆಯ ಮಾರ್ಗದಲ್ಲಿ ರುಚಿ ಅಥವಾ ಕಹಿ ಈ ದ್ವಂದ್ವದ ಹಿಡಿತದಿಂದ ಮುಕ್ತವಾಗಿಡಬೇಕಾಗುತ್ತದೆ. ತನ್ನ ಈ ಬೆಳವಣಿಗೆಯ ಮಾರ್ಗದಲ್ಲಿ ಇವು ಅವಶ್ಯವಾಗಿ ಬಂದೇ ಬರುತ್ತವೆ. ಈ ತರಹದ ಮುಕ್ತ ಮನಸ್ಸನ್ನು ಹೊಂದುವದಕ್ಕೆ ವೇದಗಳು ದಿವ್ಯ ಜೀವನ ಮಾರ್ಗವನ್ನು ಕೊಡುತ್ತವೆ. ಅವೇ ಜೀವನದಲ್ಲಿಯ ಕರ್ತವ್ಯವಾಗಿರುತ್ತವೆ.

ಈ ಸೃಷ್ಟಿಯಲ್ಲಿ ಎಲ್ಲವೂ ಸುಗಮವಾಗಿಯೂ ಸಮರ್ಥವಾಗಿಯೂ ನಡೆಯುತ್ತಿರುವದನ್ನು ನಾವು

Sri Vidyabharathi Book Centre, Sringeri

CC-0. In Public Domain. Digitized by eGangotri

ನೋಡುತ್ತೇನೆ. ದೊಡ್ಡ ಯಜ್ಞವೂ ಮಹಾತ್ಯಾಗವೂ ನಡೆಯುತ್ತಾ ಇರುತ್ತವೆ. ಆ ಪರಮಾತ್ಮನು ಈ ಜಗತ್ತನ್ನು ಹುಟ್ಟಿಸಿರುತ್ತಾನೆ. ಮತ್ತು ಅವನು ನಿರಂತರವಾಗಿ ಅದನ್ನು ರಕ್ಷಿಸುವ ಕೆಲಸವನ್ನು ಮಾಡುತ್ತಿರುತ್ತಾನೆ. ಉತ್ಪನ್ನವಾದಂಥಾ ಈ ಸೃಷ್ಟಿಯನ್ನು ಸಂರಕ್ಷಿಸುವವನು ಭಗವಾನ್ ವಿಷ್ಣುವು ಆಗಿದ್ದಾನೆ. ಮತ್ತು ಅವನು ಸಾಧಾರಣವಾಗಿ ಹಾವಿನ ಹಾಸಿಗೆಯ ಮೇಲೆ ಮಲಗಿಕೊಂಡಿರುವಂತೆ ಬಣ್ಣಿಸಲ್ಪಟ್ಟಿದ್ದಾನೆ. ಆದರೆ ಅವನು ಏನೂ ಮಾಡುತ್ತಿರುವದಿಲ್ಲವೆಂದು ಇದರ ಅರ್ಥವಲ್ಲ. ತದ್ವಿರುದ್ಧ ಯಾವ ಪ್ರಯಾಸವಿಲ್ಲದೆ ಆತ್ಮ ಸಂತೋಷದಿಂದಲೇ ಆ ಪರಮಾತ್ಮನೂ ಹೇಗೆ ಎಲ್ಲವನ್ನೂ ರಕ್ಷಿಸುತ್ತಿದ್ದಾನೆಂಬುದನ್ನು ಅದು ತೋರಿಸಿಕೊಡುತ್ತದೆ. ಸೃಷ್ಟಿಯಿಂದ ಬೇರೆಯಾಗಿ ನಾವಿರುವದಿಲ್ಲ. ಆದ್ದರಿಂದ ಈ ದೇಹದಲ್ಲಿರುವ ಸಣ್ಣ ಗ್ರಂಥಿಯೂ ಕೂಡ ತನ್ನ ಕೆಲಸವನ್ನು ಹೇಗೆ

Sri Vidyabharathi Book Centre, Sringeri

CC-0. Mumukshu Bhawan Varanasi Collection. Digitized by eGangotri

ಮಾಡುತ್ತದೆ. ಹಾಗೆಯೆ ನಾವೂ ಕೂಡ ಇದೇ ಪ್ರಕಾರ ಕೆಲಸವನ್ನು ಮಾಡಬೇಕಾಗುತ್ತದೆ. ಆ ಸಣ್ಣ ಗ್ರಂಥಿಯು ಚಿಕ್ಕ ಕೆಲಸವನ್ನು ಮಾಡುವುದರಿಂದ ಈ ಇಡೀ ದೇಹದ ಕಾರ್ಯವನ್ನು ಸುಗಮವಾಗಿ ನಡೆಯಲು ಸಹಾಯಮಾಡುತ್ತದೆ. ಈ ಗ್ರಂಥಿಯು ತನ್ನ ಕೆಲಸವನ್ನು ಸರಿಯಾಗಿ ನಿರ್ವಹಿಸದಿದ್ದರೆ, ಈ ಇಡೀ ದೇಹದ ಕ್ರಿಯೆಯು ತೊಂದರೆಗೊಳಗಾಗುತ್ತದೆ. ಈ ಸೃಷ್ಟಿಯಲ್ಲಿ ನಾವು ಕೂಡಾ ಸುಮ್ಮನೆ ಕುಳಿತು ನೋಡುವವರಲ್ಲ. ನಾವು ಪಾಲುಗಾರರು. ಈ ಮನುಷ್ಯ ಸೃಷ್ಟಿಯ ಕೆಲಸವು ಕೇವಲ ಸಾಕ್ಷೀರೂಪವಾಗಿಯೇ ಇರುವದಾಗಿದ್ದರೆ, ಅವನಿಗೆ ನೋಡಲು, ಕೇಳಲು, ರುಚಿನೋಡಲು, ಮೂಸಿಸಲು ಮತ್ತು ಸ್ಪರ್ಶಮಾಡುವ ಸಲುವಾಗಿ ತಲೆಯನ್ನು ಮಾತ್ರ ಕೊಡಬಹುದಾಗಿತ್ತು. ಆಗ್ಗೆ ಈ ಒಂದು ತಲೆಯು ಮತ್ತೊಂದು ತಲೆಯನ್ನೂ ಮತ್ತು ಈ ಜಗತ್ತನ್ನೂ ಮಾತ್ರ ನೋಡುವಂತಾಗುತ್ತಿತ್ತು. ಆಗ್ಗೆ ನೋಡುವುದು, ರುಚಿ ನೋಡುವದು, ಮೂಸಿ

Sri Vidyabharathi Book Centre, Sringeri

CC-0. In Public Domain. Digitized by eGangotri

ನೋಡುವಂತೆಯೇ ಅವನಿಗೆ ಅವಕಾಶ ಈ ಸೃಷ್ಟಿಯಲ್ಲಿ ಭಾಗವಹಿಸುವದು ಆಗುತ್ತಿತ್ತು. ಆದರೆ ನಮಗೆ ಕಾಲುಗಳೂ, ಕೈಗಳೂ ಇರುವದರಿಂದ ನಾವು ಕರ್ತವ್ಯಮಾಡಬೇಕೆಂಬುದು ಸ್ಪಷ್ಟವಾಗುತ್ತದೆ. ಈ ಸೃಷ್ಟಿಯಲ್ಲಿಯ ಪ್ರತಿಯೊಂದು ವ್ಯಕ್ತಿಯು ಕೆಲಸ ಮಾಡುತ್ತಾನೆ. ವೃಕ್ಷವೂ ಕೂಡ ತಾನು ಮಾಡಬೇಕಾದ ಕೆಲಸವನ್ನು ಮಾಡುತ್ತದೆ. ಮಾವಿನ ಗಿಡವು ಮಾವಿನ ಹಣ್ಣುಗಳನ್ನು ಕೊಡುತ್ತದೆ. ಮತ್ತು ನಿಂಬೆಗಿಡವು ನಿಂಬೆ ಹಣ್ಣನ್ನು ಕೊಡುತ್ತದೆ. ಹಸುಗಳು ಮತ್ತು ಗುಂಗಾಡುಗಳು ಸಹಿತ ತಾವು ಮಾಡಬೇಕಾದ ಕಾರ್ಯದಂತೆಯೇ ವರ್ತಿಸುತ್ತವೆ. ಅವು ತಮ್ಮ ಕಾರ್ಯಗಳನ್ನು ನಿಯಮಿಸಿಕೊಟ್ಟಂತೆಯೇ ಮಾಡುತ್ತವೆ. ಮಾನವನು ತನಗೆ ಯೋಗ್ಯವಾದ ಕೆಲಸ ಮಾಡುವದನ್ನು ಕಲಿಯಬೇಕಾಗುತ್ತದೆ. ಯಾಕೆಂದರೆ ಅವನಿಗೆ ಅರಿಸಿಕೊಳ್ಳುವ ಸ್ವಯಂ ಪ್ರಜ್ಞೆಯನ್ನು ದೇವನಿಗೆ ರೂಪವಾಗಿ ಕೊಡಲಾಗಿದೆ. ಮನುಷ್ಯನಿಗೆ

CC-0. In Public Domain. Digitized by eGangotri

ಏನಾದರೊಂದು ಕೆಲಸವನ್ನು ಈ ರೀತಿ ಮಾಡಬೇಕು ಅಥವಾ ಮಾಡಬಾರದು ಅಥವಾ ಮತ್ತೊಂದು ರೀತಿಯಲ್ಲಿ ಮಾಡಬೇಕು ಎನ್ನುವ ಅವಕಾಶವಿರುತ್ತದೆ. ಮನುಷ್ಯನ ಮನಸ್ಸು ವನಸ್ಪತಿಗಳಂತೆ ಮತ್ತು ಪ್ರಾಣಿಗಳಂತೆ ಪೂರ್ವನಿಯೋಜಿತವಾಗಿರುವದಿಲ್ಲ. ಆದ್ದರಿಂದ ಮನುಷ್ಯನು ತನ್ನ ಗುರಿಯನ್ನು ಆರಿಸಿಕೊಳ್ಳಬೇಕು ಮತ್ತು ಆ ಗುರಿಯನ್ನು ಸಾಧಿಸುವದಕ್ಕೋಸ್ಕರ ಸರಿಯಾದ ಮಾರ್ಗವನ್ನು ಸ್ವೀಕರಿಸಲೇಬೇಕು.

ತಾನು ಪೂರ್ಣನೇ ಆಗಿರುವದರಿಂದ ಮನುಷ್ಯನ ಜೀವನವು ಸಾಧಿಸುವದಕ್ಕಿಂತ ವಿಕಾಸ ಹೊಂದುವಂತಹದು ಆಗಿರಬೇಕು. ಪಡೆದುಕೊಳ್ಳುವದು ಮುಖ್ಯವಲ್ಲದ್ದಿರುವದರಿಂದ, ನಾನು ಏನು ಮಾಡಬೇಕು ಎನ್ನುವದು ಮಹತ್ವದ್ದಲ್ಲ, ಯಾವ ಮನೋಭಾವದಿಂದ ಈ ಕೃತಿಯನ್ನು ನೆರವೇರಿಸುವೆನೆಂಬುದು ಮುಖ್ಯ. ಯಾಕೆಂದರೆ ಸರಿಯಾದ ಮನೋಭಾವವು ಮನಸ್ಸನ್ನು

Sri Vidyabharathi Book Centre, Sringeri

ತಾಕಲ್ಲಾಟದಿಂದ ಬಿಡುಗಡೆಮಾಡುತ್ತದೆ.
CC-O. In Public Domain. Digitized by eGangotri
ಈ ಕಾರ್ಯಪದ್ಧತಿಯು ಶ್ರೀಮದ್‌ಭಗವದ್ಗೀತೆಯಲ್ಲಿ ಸುಂದರವಾಗಿ ವರ್ಣಿಸಲ್ಪಟ್ಟಿದೆ-

"ಯಾವನು ಈ ಸಮಸ್ತ ಸೃಷ್ಟಿಗೆ ಕಾರಣನೋ, ಯಾವನು ಈ ವಿಶ್ವವನ್ನೆಲ್ಲ ವ್ಯಾಪಿಸಿರುವನೋ, ಆ ಪರಮೇಶ್ವರನನ್ನು ತಮ್ಮ ತಮ್ಮ ಕರ್ಮಗಳಿಂದ ಪೂಜಿಸಿದಾಗ ಅಂಥ ಮಾನವರು ಸಿದ್ಧಿಯನ್ನು ಪಡೆಯುತ್ತಾರೆ."(ಭ. ಗೀತಾ-೧೮-೪೬) (ಎಲ್ಲ ಕರ್ಮಗಳನ್ನು ಫಲಾಪೇಕ್ಷೆಯಿಲ್ಲದೇ ಈಶ್ವರಾರ್ಪಣ ಭಾವದಿಂದ ಮಾಡಬೇಕು- ಎಂಬುದನ್ನು ಪರ್ಯಾಯದಿಂದ ಹೇಳಿದೆ ಇದರಲ್ಲಿ.)

ಯತಃ ಪ್ರವೃತ್ತಿರ್ಭೂತಾನಾಂ ಯೇನ ಸರ್ವಮಿದಂ ತತಂ ।
ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ॥

(ಭ. ಗೀತಾ)

ಕರ್ತವ್ಯದ ಮನೋಭಾವನೆಯಿಂದ ಯಾವ ಕಾರ್ಯವು ಮಾಡಲ್ಪಡುವದೋ ಅದೇ

Sri Vidyabharathi Book Centre, Sringeri

Digitized by eGangotri
ಪೂಜೆಯಾಗುತ್ತದೆ. ಆ ಸ್ಥಿತಿಯಲ್ಲಿ ಪ್ರಾಪ್ತವಾದ ನನಗೆ ಸರಿಯಾದ ಕಾರ್ಯವನ್ನು ಮಾಡಲು ಅನುವುಮಾಡಿಕೊಡುವಂತಹ ಅವಸ್ಥೆಯಲ್ಲಿ ನಾನಿರುವೆನೆಂದು ಗೊತ್ತಾಗುತ್ತದೆ. ತದನಂತರ ನಾನು ಅದನ್ನು ಮಾಡಲೇಬೇಕಾಗಿರುವದರಿಂದ, ಸಂತೋಷದಿಂದಲೇ ಮಾಡುತ್ತೇನೆ.

ಹೀಗಾಗಿ ಕಾರ್ಯ ಸಿದ್ಧಿಗಿಂತ, ಕಾರ್ಯವೇ ಮಹತ್ವದ್ದಿರುವದರಿಂದ ಅಂತಹ ಕಾರ್ಯದಲ್ಲಿ ಶ್ರೇಷ್ಠತನ ಅಥವಾ ಕೀಳುತನ ಎಂಬುದಿರುವದಿಲ್ಲ. ಇದು ಪರಮಾತ್ಮನ ಸೃಷ್ಟಿಯು. ಇದರಲ್ಲಿ ನಾನೊಬ್ಬ ಪಾತ್ರಧಾರನು. ಇಂತಹ ಸ್ಥಿತಿಯಲ್ಲಿಯೇ ನಾನಿರುವದರಿಂದ ಅದಕ್ಕೊಂದು ವಿಶಿಷ್ಟ ಅರ್ಥವಿರಲೇಬೇಕು. ಹೀಗಾಗಿ ಈ ಕ್ರಮವನ್ನು ವಹಿಸಲೇಬೇಕಾಗುತ್ತದೆ ಮತ್ತು ಅದು ಮಾಡಲ್ಪಟ್ಟಿರುತ್ತದೆ. ಇದು ಆ ಪರಮಾತ್ಮನ ಅರ್ಚನೆ ಅಥವಾ ಪೂಜೆ ಎಂದು ಅನಿಸಿಕೊಳ್ಳಲ್ಪಡುತ್ತದೆ. ಇದೇ "ಕರ್ಮಯೋಗ."

Sri Vidyabharathi Book Centre, Sringeri

CC-0. In Public Domain. Digitized by eGangotri

ನನಗೆ ಕೊಟ್ಟ ಈ ಪರಿಸ್ಥಿತಿಯಲ್ಲಿ, ನಾನು ಆ ಕಾರ್ಯವನ್ನು ಮಾಡಲೇಬೇಕಾಗಿರುವದರಿಂದ ನಾನು ಆ ಕಾರ್ಯವನ್ನು ಮಾಡುತ್ತೇನೆ. ಆಗ ನಾನು ಭ್ರಮೆಯಲ್ಲಿ ಆಗಲಿ ಅಥವಾ ರುಚಿ ಮತ್ತು ಅರುಚಿಯ ವಶದಲ್ಲಿ ಆಗಲಿ ಇರುವದಿಲ್ಲ. ನಾನು ಈ ಪರಿಸ್ಥಿತಿಯನ್ನು ಅನುಸರಿಸಿ ಮಾಡಬೇಕಾದದ್ದನ್ನು ಮಾಡುತ್ತೇನೆ. ನನಗೆ ಕೊಟ್ಟ ಆ ಪರಿಸ್ಥಿತಿಯಲ್ಲಿ, ನಾನು ಮಾಡಲಿಚ್ಛಿಸುವದು ಒಂದು ಇರಬಹುದು. ಆದರೆ ಆ ಪರಿಸ್ಥಿತಿಯಲ್ಲಿ ಯೋಗ್ಯವಾಗದೆ ಇದ್ದರೆ, ನಾನು ಆ ಕಾರ್ಯ ಮಾಡುವದನ್ನು ತ್ಯಜಿಸುತ್ತೇನೆ. ನಾನು ನನ್ನ ಇಚ್ಛೆಯನ್ನು ಬಿಟ್ಟು, ನನಗೆ ಇಚ್ಛೆ ಇಲ್ಲದ್ದನ್ನು ಮಾಡುತ್ತೇನೆ- ಇದೇ ಕರ್ತವ್ಯವು. ಅದು ನನ್ನ ಇಚ್ಛೆಗೆ ಬೇಕಾಗಿದ್ದೇ ಇರಲಿ ಅಥವಾ ಬೇಡವಾದದ್ದೇ ಇರಲಿ, ಅದನ್ನು ಮಾಡುವದೇ ಕರ್ತವ್ಯ. ಆ ಕರ್ತವ್ಯವು ನನ್ನ ಇಚ್ಛೆಗೆ ಅನುಗುಣವಾಗಿಯೇ ಇದ್ದರೆ ಆಗ ಅದು ಸಹಜವಾಗಿಯೇ ಜರಗುತ್ತದೆ. ಕರ್ತವ್ಯವು ಇಚ್ಛೆಗೆ

Sri Vidyabharathi Book Centre, Sringeri

CC-0. In Public Domain. Digitized by eGangotri

ಅನುಗ್ರಹವಾಗಿರದಿದ್ದರೆ ಆ ಕಾರ್ಯವು ಬುದ್ಧಿಪೂರ್ವಕವಾಗಿಯೇ ಜರಗುತ್ತದೆ-ಇದೇ "ಕರ್ಮಯೋಗ." ನಾನು ಮಾಡುವ ಕಾರ್ಯವು ಸರಿ ಇರಲಿ ಅಥವಾ ಇರದೇ ಇರಲಿ, ಆಗ್ಗೆ ಆ ಕೆಲಸವನ್ನು ನನ್ನ ಮನಸ್ಸಿನಂತೆಯೇ ಮಾಡಿದ್ದೇ ಆದರೆ ಅದು ಸ್ವ-ಸ್ಫೂರ್ತಿಯಿಂದ ಮಾಡಿದಂತಾಗುತ್ತದೆ. ಸ್ಫೂರ್ತಿಯುಳ್ಳ ಮನುಷ್ಯನು, ಬೇಕು-ಬೇಡಗಳ ಬಂಧನದಲ್ಲಿರುತ್ತಾನೆ. ಆದ್ದರಿಂದ ಅವನು ಪೂರ್ಣ ಸಂಘರ್ಷಣೆಗೊಳಗಾಗುತ್ತಾನೆ. ಆದರೆ ಬುದ್ಧಿಯುಕ್ತ ಮನುಷ್ಯನು ಮಾಡಬೇಕಾದ ಕರ್ತವ್ಯವನ್ನು ಮಾಡುವದರಿಂದ, ಬೇಕು-ಬೇಡೆಂಬುವ (ದ್ವಂದ್ವ) ಬಂಧನದಿಂದ ಕ್ರಮೇಣ ತನ್ನ ಮನಸ್ಸನ್ನು ಮುಕ್ತಗೊಳಿಸುತ್ತಾನೆ. ಇದೇ ಶ್ರೀಮದ್ ಭಗವದ್ಗೀತೆಯಲ್ಲಿ ಹೇಳಿದ ಸಂಸಿದ್ಧಿ ಅಥವಾ ಪೂರ್ಣಾವಸ್ಥೆಯು. ಯಾವ ಮನುಸ್ಸು ಈ ತಾಕಲಾಟದ ವಿಮೋಚನೆಯ ಆನಂದವನ್ನು ಅನುಭೋಗಿಸುತ್ತದೆಯೋ ಅದೇ

Sri Vidyabharathi Book Centre, Sringeri

ಮನಸ್ಸು ನಿರಂಕುಶವಾದ ಮುಕ್ಕಾಯವನ್ನು
CC-O. In Public Domain. Digitized by eGangotri
ಗುರುತಿಸುವ ಸರಿಯಾದ ಸಾಧನವೆನಿಸುತ್ತದೆ. ಇದೂ
ಸಹ ಆರ್ಷವಿದ್ಯೆಯೇ.

Sri Vidyabharathi Book Centre, Sringeri

CC-O. In Public Domain. Digitized by eGangotri

ಋಷಿಗಳ ದೃಷ್ಟಿಯಾದ ಆರ್ಷದರ್ಶನವು ಮನೋಹರ- ವಾಗಿರುತ್ತದೆ. ನಿನ್ನ (ಆತ್ಮಾ) ಬಗ್ಗೆ ಋಷಿಗಳ ಕೊನೆಯ ಮಾತೇ ಆಗಿದ್ದರಿಂದ ಅದನ್ನು ಹೆಚ್ಚು ಸುಧಾರಿಸಲು ಯಾರಿಂದಲೂ ಸಾಧ್ಯವಾಗದು. ಬೇರೆಯವರು ನೀನು ಪೂರ್ಣದಭಾಗ, ಸಣ್ಣವನು. ಮರಣೀ, ಧೀನನು ಇತ್ಯಾದಿ ಎಂದು ಹೇಳಬಹುದು. ಆದರೆ ಋಷಿಗಳು ನೀನು ಪೂರ್ಣನೆಂದು ಹೇಳುವರು ಮತ್ತು ಯಾರೂ ಇದಕ್ಕಿಂತ ಹೆಚ್ಚು ಹೇಳಲಾರರು ! ಇದಕ್ಕಿಂತ ಹೆಚ್ಚು ಯಾರು ಸುಧಾರಿಸಬಲ್ಲರು? ಇದಕ್ಕಿಂತ ಹೆಚ್ಚು ಯಾರು ಹೇಳಬಲ್ಲರು? ನಿನ್ನ ಬಗ್ಗೆ ಇದು ಅವರ ಕೊನೆಯ ಹೇಳಿಕೆಯಾಗಿರುತ್ತದೆ. ಮತ್ತು ಈ ಸೃಷ್ಟಿಯಲ್ಲಿಯೇ ನೀನೇ ಕೊನೆಯವನೆಂದು ಹೇಳುವರು ! ಆದ್ದರಿಂದ ಆರ್ಷವಿದ್ಯೆಯ ಈ ದೃಷ್ಟಿಯನ್ನು ಹೆಚ್ಚು ಸುಧಾರಿಸಲಿಕ್ಕಾಗದು. ಯಾವದೇ ತರಹದ ಅಭಿಪ್ರಾಯಕ್ಕೆ ಒಳಗಾಗದೆ ಇದ್ದ ಕಾರಣ

Sri Vidyabharathi Book Centre, Sringeri

CC-0. Mumukshu Bhawan Varanasi Collection. Digitized by eGangotri

ಇದು ಸುಳ್ಳು ಗಾಳಿಮಾತು ಪೂರ್ಣವು ಕಾಲಾತೀತ ಇತ್ಯಾದಿ ಆದ್ದರಿಂದ ಅದು ಯಾವದೇ ತರಹದ ವಾದ-ವಿವಾದಕ್ಕೊಳಗಾಗದು. ಆದ ಕಾರಣ ಅದನ್ನು ಗುರುವಿನಿಂದ ಶಿಷ್ಯನತನಕ ಅಖಂಡವಾಗಿಯೇ ಕೊಡಬಲ್ಲದು.



CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಮುದ್ರಣ :

ಶ್ರೀ ಗಾಯತ್ರಿ ಪ್ರಿಂಟ್ಸ್

55, ಹಳೇ - ಹುಬ್ಬಳ್ಳಿ ಕಿಲ್ಲೆ, ಮುಖ್ಯ ರಸ್ತೆ, ಹುಬ್ಬಳ್ಳಿ - 580 024

ದೂರವಾಣಿ : 0836 - 2366 241

Sri Vidyabharati Book Centre, Sringeri